೫) ಕಾರ್ಖಾನೆಯು ಉನ್ನತ ಹಣಕಾಸು ಸಂಸ್ಥೆಗಳಾದ ಐ. ಎಫ್. ಸಿ. ಐ. ಎಲ್. ಐ. ಸಿ. ಐ. ಅಪೆಕ್ಸ್ ಬ್ಯಾಂಕ ಮತ್ತು ಕೆ. ಎಸ್. ಎಫ್. ಸಿ. ಗಳಿಂದ ಪಡೆದಿದ್ದ ಒಟ್ಟು ರೂ. ೧೬೨.೦೦ ಲಕ್ಷ ರೂ. ಗಳ ಸಾಲವನ್ನು ೮೫-೮೪ರ ಅಂತ್ಯ ದೊಳಗೆ ಬಡ್ಡಿ ಸಮೇತ ತೀರುವಳಿ ಮಾಡಿರುತ್ತೆ. ಆದರೆ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ಚಿತ್ರದುರ್ಗದಿಂದ ಪಡೆದಿದ್ದ ವಿವಿಧ ಸಾಲಗಳ ಪೈಕಿ ಪ್ರಾಥಮಿಕ ಸಹಕಾರ ಸಂಘಗಳಿಂದ ಬರಬೇಕಾಗಿದ್ದ ಸುಮಾರು ರೂ. ೪೨.೪೭ ಲಕ್ಷ ರೂ. ಗಳು ಸಾಲಗಾರರಿಂದ ವಸೂಲಾಗದೆ ಬಾಕಿ ಉಳಿದಿರುತ್ತದೆ. ಹಾಗೂ ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ಪಡೆದ ದೀರ್ಘಾವಧಿ ಸಾಲದ ಬಾಬ್ತು ದಿನಾಂಕ ೩೧-೯-೮೬ರ ಅಂತಕ್ಕೆ ೧.೯೧ ಲಕ್ಷ ರೂ. ಗಳನ್ನು ಮರು ಪಾವತಿ ಮಾಡಿದ್ದು ಇನ್ನೂ ೨.೫೫ ಲಕ್ಷ ರೂ. ಗಳು ಬಾಕಿ ಇರುತ್ತದೆ.

ಗಾಣಿಗಾಪುರ ಕ್ಷೇತ್ರದಲ್ಲಿ ಸ್ನಾನಘಟ್ಟ ನಿರ್ಮಿಸುವುದು

ಶ್ರೀ ಕೆ. ಹೆಚ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗುಲ್ಬರ್ಗಾ ಜಿಲ್ಲಾ, ಗಾಣಗಾಪುರ ಕ್ಷೇತ್ರದ ಪವಿತ್ರ ಸಂಗಮದಲ್ಲಿ ಯಾತ್ರಿಕರ ಅನುಕೂಲ ಕ್ಕಾಗಿ ಒಂದು ಸ್ನಾನ ಘಟ್ಟವನ್ನು ನಿರ್ಮಿಸಬೇಕಾದ ಅಗತ್ಯವಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಲ್ಲಿ ಶೀಘ್ರವೇ ಒಂದು ಉತ್ತಮ ಸ್ನಾನ ಘಟ್ಟವನ್ನು ನಿರ್ಮಿಸಲು ಸರ್ಕಾರದವರ ಕ್ರಮ ಕೈಗೊಳ್ಳುವರೇ ?

ಶ್ರೀ ಕೆ. ಅಪ್ಪಾರನಾಥ ಶೆಟ್ಟಿ (ಧಾರ್ಮಿಕ ಮತ್ತು ದತ್ತಿ ರಾಜ್ಯ ಮಂತ್ರಿಗಳು).—

ಅ) ಬಂದಿದೆ,

ಆ) ಈಗಾಗಲೇ ಕ್ರಮ ಕೈಗೊಂಡಿದೆ.

ರೈತರು ತಮ್ಮ ಜಮೀನುಗಳನ್ನು ರೈತರು ಕಳೆದ 50 ವರ್ಷಗಳಿಂದಲೂ ಹಂಗಾಮಿ ಸಾಗುವಳಿ ಮಾಡುತ್ತಿರುವುದು

೧೦೧೭. ಶ್ರೀ ಕೆ. ಎಲ್. ಶಿವಲಿಂಗೇಗೌಡ (ಸಾತನೂರು).—ಮಾನ್ಯ ಕಂದಾಯ ಮಂತ್ರಿ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕನಕಪುರ ತಾಲ್ಲೂಕು ಕೋಡಿಹಳ್ಳಿ ಹೋಬಳಿಯಲ್ಲಿ ರೈತರು ಕಳೆದ ೫೦ ವರ್ಷಗಳಿಂದ ಕಂದಾಯ ಜಮೀನುಗಳನ್ನು ಹಂಗಾಮಿಯಾಗಿ ಅನುಭವಿಸಿಕೊಂಡು ಬರುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಸಾಗುವಳಿ ಮಾಡುತ್ತಿರುವವರಿಗೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಕಾನೂನಿನ ತೊಂದರೆಗಳೇನು ? ಹಾಗೂ ಯಾವಾಗ ಮಂಜೂರ್ಮಾಡಲಾಗುವುದು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮತ್ತು ಯೋಜನಾ ಮಂತ್ರಿಗಳು).—

ಅ) ಬಂದಿದೆ.

ಆ) ೪೦೩ ರೈತರು ಸುಮಾರು ೮೬೮ ಎಕರೆ ೨೮ ಗುಂಟೆ ಕಂದಾಯ ಜಮೀನನ್ನು ಹಂಗಾಮಿಯಾಗಿ ಗುತ್ತಿಗೆ ಸಾಗುವಳಿ ಮಾಡುತ್ತಿದ್ದಾರೆ. ೪೦೩ ಜನರ ಪೈಕಿ ೧೫೫ ಜನರಿಗೆ ೩೧೦ ಎಕರೆ ಜಮೀನಿಗೆ ಖಾಯಂ ಸಾಗುವಳಿ ಚೀಟಿಗಳನ್ನು ನೀಡಲಾಗಿದೆ. ಇನ್ನುಳಿದ ೨೪೮ ಮಂದಿ ರೈತರು ಅನುಭವಿಸುತ್ತಿರುವ ೫೯೯-೨೮ ಗುಂಟೆ ಜಮೀನಿನ ಖಾಯಂ ಸಾಗುವಳಿ ಚೀಟಿಗಳನ್ನು ಕೊಡುವ ವಿಷಯವು ತೀವ್ರ ಪರಿಶೀಲನೆಯಲ್ಲಿದೆ.